ದಿನಗಳಲ್ಲಿ ಜನರು ದೂರ ದೂರದ ನಗರಗಳಿಂದ ಬರತೊಡಗಿದರು. ರಸ್ತೆ ಅನುಕೂಲ ಇರುವ ಕಡೆ ಕಾಡಂಚಿನಲ್ಲಿ, ಹೊಳೆ ಬದಿಯಲ್ಲಿ ಹೋಂಸ್ಟೇಗಳಾದವು. ಬಂದು ಹೋಗುವ ಜನರ, ಸ್ಥಳೀಯ ಪ್ರದೇಶಗಳ ಓಡಾಟಕ್ಕೆ ಜೀಪು ಕಾರುಗಳು ಬೇಕಾದವು. ಕಾಫಿಯಲ್ಲಿ ಆಗಲೇ ಸ್ವಲ್ಪ ದುಡ್ಡು ಕಾಣತೊಡಗಿದ್ದ ಕೆಲ ಯುವಕರು ಸೆಕೆಂಡ್ ಹ್ಯಾಂಡ್ ಜೀಪು, ಮಾರುತಿ ವ್ಯಾನು ಕೊಂಡುತಂದು ಪ್ರವಾಸಿಗರ ಅವಶ್ಯಕತೆಗೆ ತಕ್ಕಂತೆ ಬಾಡಿಗೆಗೆ ಓಡಿಸಿ ದುಡ್ಡು ಮಾಡತೊಡಗಿದರು.

ಪಕ್ಕದ ಊರಿನಲ್ಲಿದ್ದ ತಮ್ಮ ಕಾಡಂಚಿನ ತೋಟದಲ್ಲಿ ಹೋಂಸ್ಟೇ ಕಟ್ಟಿಕೊಂಡು, ಜೀಪು ಓಡಿಸಿಕೊಂಡು ಕೈ ತುಂಬಾ ವರಮಾನ ಕಾಣುತ್ತಿದ್ದ ಭೀಮಣ್ಣನ ಮನೆ ಜಯಪ್ಪ ಹಾಗೂ ಅವನ ಹೆಂಡತಿಗೆ ಮನೆಗಳಿಂದ ಕಿಕ್ಕಿರಿದ ಕಿಷ್ಕಿಂದೆಯಂಥ ಊರು ಉಸಿರುಗಟ್ಟಿಸುತ್ತಿರುವಂತೆನಿಸಿತು.

ಹ್ಯಾಗೂ ಕೈಯಲ್ಲಿ ದುಡ್ಡು ಓಡಾಡುತ್ತಿತ್ತು. ರಸ್ತೆಯುದ್ದಕ್ಕೂ ಇದ್ದ, ಅಂಗಡಿ ಬೀದಿಯಾಚೆಯ ಗದ್ದೆಬಯಲಿನಲ್ಲಿ, ಅವರಿಗಿದ್ದ ಒಂದೆಕರೆಯಲ್ಲಿ ಅರ್ಧಕ್ಕೆ ಮಣ್ಣು ತುಂಬಿ ಎತ್ತರಿಸಿ ಒಂದು ತಾರಸಿ ಮನೆ ಕಟ್ಟಿಸಿ ಗೃಹಪ್ರವೇಶ ಮಾಡಿಯೇಬಿಟ್ಟರು. ಅದು ಊರ ಜನರ ಕಣ್ಣು ಕುಕ್ಕತೊಡಗಿತು.

ಮಹಾನಗರದಲ್ಲಿ ಬೇಕರಿಗೆ ಸೇರಿಕೊಂಡಿದ್ದ ಹಳೆಮನೆ ಕೃಷ್ಣೇಗೌಡ ಕೆಲಸ ಕಲಿತು ಅಲ್ಲಿಯೇ ಹೊಸ ಬಡಾವಣೆಯೊಂದರಲ್ಲಿ ತಾನೇ ಸ್ವಂತ ಬೇಕರಿ ಮಾಡಿಕೊಂಡಿದ್ದ. ಊರಲ್ಲಿ ಕಾಫಿಯಿಂದಲೂ ವರಮಾನ ಇತ್ತು. ಅವನಿಗೂ ಊರಲ್ಲಿ ಒಂದು ಒಳ್ಳೆಯ ಮನೆ ಕಟ್ಟಿಸಬೇಕೆಂಬ ಆಸೆ ಇತ್ತು. ಆದರೆ ರಸ್ತೆಪಕ್ಕದ ಆ ಬಯಲಿನಲ್ಲಿ ಅವನಿಗೆ ಗದ್ದೆ ಜಮೀನಿರಲಿಲ್ಲ. ಅಲ್ಲಿ ಮನೆ ಕಟ್ಟಿಕೊಳ್ಳಲು ಒಂದೆರಡು ಗುಂಟೆ ಜಾಗಕ್ಕಾಗಿ ಹಲವಾರು ಜನರನ್ನು ಸಂಪರ್ಕಿಸಿದ. ಕೊನೆಯಲ್ಲಿ ಗುಂಟೆಗೆ ಮೂರು ಲಕ್ಷದಂತೆ ಎರಡು ಗುಂಟೆ ಕೊಡಲು ಒಬ್ಬ ಒಪ್ಪಿದ. ಕೃಷ್ಣೇಗೌಡ ಆರು ಲಕ್ಷ ಕೊಟ್ಟು ಎರಡು ಗುಂಟೆ ಬರೆಸಿಕೊಂಡೇಬಿಟ್ಟ. ಅಂದಿನಿಂದ ಆ ಬಯಲಿನಲ್ಲಿ ಭೂಮಿಗೆ ಅದೇ ರೇಟು ನಿಗದಿಯಾಗಿಹೋಯಿತು.

'ಅಬ್ಬಾ! ಗುಂಟೆಗೆ ಮೂರು ಲಕ್ಷ...ಅಲ್ಲಿಗೆ ಎಕರೆಗೆ ಒಂದು ಕೋಟಿ ಇಪ್ಪತ್ತು ಲಕ್ಷ!' ಜನ ಆಶ್ಚರ್ಯದಿಂದ ಬಾಯಿ ಮೇಲೆ ಬೆರಳಿಟ್ಟುಕೊಂಡರು.

ಅದೇ ವೇಗದಲ್ಲಿ ಹೋಬಳಿ ಕೇಂದ್ರವಾದ ಆ ಊರೂ ಅಭಿವೃದ್ಧಿ ಹೊಂದತೊಡಗಿತ್ತು. ಹೈಸ್ಕೂಲು, ನಾಡಕಚೇರಿ, ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲು ಮಂಜೂರಾದವು. ಅವುಗಳು ಕಾರ್ಯನಿರ್ವಹಿಸಲು ಗದ್ದೆಯಾಚೆಯ ದೇವರಬನದ ದೀಣೆಯ ಸರ್ಕಾರಿ ಜಾಗದಲ್ಲಿ ಕಟ್ಟಡಗಳೆದ್ದವು. ಅಂಗಡಿ ಬೀದಿಯ ಇಕ್ಕಟ್ಟಿನಲ್ಲಿ, ನಾಡಹಂಚಿನ ಮನೆಗಳಲ್ಲಿ ನಡೆಯುತ್ತಿದ್ದ ಆಸ್ಪತ್ರೆ, ದನದ ಆಸ್ಪತ್ರೆಗಳೂ ಅಲ್ಲಿಗೇ ಸ್ಥಳಾಂತರಗೊಂಡು ಹೊಸ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುವಂತಾಯಿತು.

ಕೈಯಲ್ಲಿ ಪುಡಿಗಾಸು ಓಡಾಡತೊಡಗಿದಂತೆಲ್ಲಾ ಜನ ಒಬ್ಬರ ಮಾತು ಒಬ್ಬರು ಕೇಳದಂತಾದರು. ಅಲ್ಲಲ್ಲಿ ನೂಕಾಟ, ರಗಳೆಗಳು ಆಗತೊಡಗಿದವು. ಹಿರಿಯರ ಮಾತಿಗೆ ಕವಡೆ ಕಿಮ್ಮತ್ತು ಇಲ್ಲದಂತಾಗತೊಡಗಿತು. ಮೊದಲೆಲ್ಲಾ ಊರೊಳಗೆ ಪೋಲೀಸರು ಕಾಲಿಟ್ಟರೆ ಅಪಶಕುನ ಎಂದು ಜನ ಭಾವಿಸುತ್ತಿದ್ದ ಆ ಊರಿಗೇ ಒಂದು ಪೋಲೀಸು ಠಾಣೆ ಮಂಜೂರಾಗಿ ದೇವರಬನದ ದೀಣೆಯ ಆಯಕಟ್ಟಿನ ಜಾಗದಲ್ಲಿ ಪ್ರತಿಷ್ಠಾಪನೆಗೊಂಡಿತು.

ನೋಡನೋಡುತ್ತಲೇ ಅಲ್ಲೊಂದು ಆಧುನಿಕ ಬಡಾವಣೆ ನಿರ್ಮಾಣಗೊಂಡು ಪಟ್ಟಣದ ರೂಪದಲ್ಲಿ ವಿಜೃಂಭಿಸತೊಡಗಿತು.

ಊರಿನ ಮುಖ್ಯರಸ್ತೆಯಿಂದ ದೇವರಬನಕ್ಕೆ ಹೋಗಲು ಕೆರೆ ಏರಿಯ ಮೇಲೆ ಟಾರು ರಸ್ತೆಯಾಯಿತು.

ಹತ್ತು ಹದಿನೈದು ವರ್ಷಗಳಲ್ಲಿ ಇಷ್ಟೆಲ್ಲಾ ಬದಲಾವಣೆಗಳು ನಡೆದುಹೋಗಿದ್ದವು.

ಹದಿನಾರು ವರ್ಷಗಳ ಹಿಂದೆ ದೇವರಬನದ ಆಚೆಯ ಕುರೋವಿನಲ್ಲಿ ಮನೆ ಮಾಡಿಕೊಂಡ ಮಂಜುನಾಥ ಏನೂ ಸುಮ್ಮನೇ ಕೂತಿರಲಿಲ್ಲ. ಕುಕೋವಿನಲ್ಲಿ ಪಾನುವಾಳ ತೀನ ನೆಟ್ಟು, ಮೂರು ವರ್ಷದಲ್ಲಿ ನೆರಳು ಏಳಿಸಿ ಅಲ್ಲಿ ಕಾಫಿ ಕೂರಿಸಿದ. ಕೆಳಗಿನ ಬಯಲಿನಲ್ಲಿ ಅವರಿಗಿದ್ದ ಎರಡೂವರೆ ಎಕರೆ ಗದ್ದೆಯಲ್ಲಿ ಅರ್ಧ ಎಕರೆ ಗೊಸರು ಇತ್ತು. ಆ ಜಾಗದಲ್ಲಿ ನೀರಿನ ಹೊಂಡ ಮಾಡಿಕೊಂಡು ಕಾಫಿಗಿಡಕ್ಕೆ ನೀರು ಹೊಡೆಯಲು ವ್ಯವಸ್ಥೆ ಮಾಡಿಕೊಂಡ. ಈಗ್ಗೆ ಏಳೆಂಟು ವರ್ಷಗಳಿಂದಲೂ ಕಾಫಿಯಲ್ಲಿ ದುಡ್ಡು ಕಾಣುವಂತಾಗಿತ್ತು.

ತಾಯಿಯನ್ನು ಕಂಕನಾಡಿ ಆಸ್ಪತ್ರೆಗೆ ಕರೆದುಕೊಂಡು